ಎಸ್.ಸಿ. ಸಂಃ10038/2021
ಸಿಡಬ್ಲ್ಯೂ- 07 / ಪಿಡಬ್ಲ್ಯೂ- 06

ಪ್ರಮಾಣ ವಚನ ಭೋದಿಸಿದ ದಿನಾಂಕಃ **19.01.2024.**

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ದಿಃ09-06-2019 ರಂದು ಗಲಾಟೆಯಾಗಿರುತ್ತದೆ. ದಿನಾಂಕಃ 04-04-2020 ರಂದು ಪೋಲೀಸರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ ಎಂದರೆ ಹೌದು. ದಿನಾಂಕಃ04-04-2020 ಕ್ಕೂ ಮೊದಲು ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಹೌದು. ತಾವರೆಹಳ್ಳಿ ಯಿಂದ ಸಾರೇಕೊಪ್ಪ ಸುಮಾರು 20 ಕಿ ಮೀ ದೂರ ಇದೆ ಎಂದರೆ ಹೌದು. ಆರೋಪಿತರು ತೋಟಕ್ಕೆ ಬೇಲಿ ಹಾಕಿದ್ದ ಸರ್ವೆ

ನಂಬರ್ ನನಗೆ ಗೊತ್ತಿಲ್ಲ. ಆ ದಿನ ನಾನು ತಾವರೆಹಳ್ಳಿಯಿಂದ ಸಾರೇಕೊಪ್ಪಕ್ಕೆ ಸಂಜೆ 7-30 ಗಂಟೆಗೆ ಹೋಗಿದ್ದೆನು. ಆಗ ಚಾಸಾ-2 ರವರಿಗೆ ತಲೆಗೆ ಪೆಟ್ಟಾಗಿ ಮಾತನಾಡುವ ಸ್ಥಿತಿಯಲ್ಲಿ ಇಲ್ಲದೇ ಬಿದ್ದಿದ್ದ. ಚಾಸಾ-2 ರವರ ಮನೆಯ ಬಾಗಿಲಲ್ಲಿ ಗಲಾಟೆ ಆಗಿರುತ್ತದೆ. ಸದರಿ ಗಲಾಟೆಯು ಚಾಸಾ1 ರವರ ಮನೆಯ ಬಾಗಿಲಲ್ಲಿ ಆಗಿರುತ್ತದೆ. ನಾನು ಪ್ರಾ ಸಾ - 7 ರವರನ್ನು ಗಲಾಟೆ ಬಗ್ಗೆ ಕೇಳಿ ವಿಚಾರಿಸಿರುತ್ತೇನೆ. ನಾನು ಚಾಸಾ-2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ.

ನ್ಯಾಯಾಲಯದ ಮುಂದೆ ಇರುವ ಆರೋಪಿಗಳ ಪೈಕಿ ನನಗೆ ರಮೇಶ 3 ನೇ ಆರೋಪಿ ಮಾತ್ರ ಗೊತ್ತಿರುತ್ತಾರೆ. ಉಳಿದ ಆರೋಪಿಗಳು ಗೊತ್ತಿರುವುದಿಲ್ಲ. ಆರೋಪಿತರಿಗೂ ನನಗೂ ಯಾವುದೇ ವ್ಯವಹಾರ ಇಲ್ಲ. ನನ್ನ ಮಗಳನ್ನು ಚಾಸಾ-2 ರವರಿಗೆ ಕೊಟ್ಟು ಮದುವೆ ಮಾಡಿದ್ದರಿಂದ ಸಾಕ್ಷಿ ನುಡಿಯಲು ಬಂದಿದ್ದೇನೆ. ಆರೋಪಿಗಳನ್ನು ಮೊದಲ ಬಾರಿಗೆ ಮೊನ್ನೆ ನ್ಯಾಯಾಲಯದಲ್ಲಿ ನೋಡಿದ್ದೇನೆ ಹಾಗೂ ಈ ದಿನ ನೋಡಿದ್ದೇನೆ. ಗಲಾಟೆಯಾದ ಜಾಗದ ಚಕ್ಕುಬಂದಿ ನನಗೆ ಹೇಳಲಾಗುವುದಿಲ್ಲ. ನನಗೆ ಬೆಂಕಿ ಬಿದ್ದ ತೋಟದ ಚಕ್ಕುಬಂದಿ ಗೊತ್ತಿಲ್ಲ. ಚಾಸಾ-1 ಮತ್ತು ಚಾಸಾ-2 ರವರ ತೋಟಕ್ಕೆ ಬೆಂಕಿ ಬಿತ್ತು ಎಂದು ಹೇಳಿ 1 ನೇ ಆರೋಪಿ ಮನೆಗೆ ಜೆ ಸಿ ಬಿ ತೆಗೆದುಕೊಂಡು ಹೋಗಿ 1 ನೇ ಆರೋಪಿಯ ಮನೆಯನ್ನು ಬೀಳಿಸಿ ಅವರಿಗೆ ಹೊಡೆದಿದ್ದರಿಂದ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಗೊತ್ತಿಲ್ಲ. ಪ್ರಾ ಸಾ -1 ಮತ್ತು ಚಾಸಾ-2 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಗಳು ಮತ್ತು ಚಾಸಾ-1 ಮತ್ತು ಚಾಸಾ-2 ರವರ ನಡುವೆ ಆದಂತಹ ಗಲಾಟೆಯನ್ನು ಯಾರು ಬಿಡಿಸಿರುತ್ತಾರೆ ಎಂದರೆ ಸಾಕ್ಷಿಯು ಆರೋಪಿತರು ಚಾಸಾ-1 ಮತ್ತು ಚಾಸಾ-2 ರವರನ್ನು ಹೊಡೆದು ಹೊರಟು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,<br>ಶಿವಮೊಗ್ಗ (ಪೀಠಾಸೀನ, ಸಾಗರ).